ಮಾರ್ಕೆಟ್ಟಿಗೆ ಹಾಕುತ್ತಿರುತ್ತಾರೆ. ಯಾರಾದರೂ ಪರಿಚಿತ ಸಿಬ್ಬಂದಿಗಳ ಮುಖ ಕಂಡರೆ ಸಾಕು. ಗಾಡಿಯನ್ನು ಅಲ್ಲೇ ಪಕ್ಕಕ್ಕೆ ತರುಬಿ ಕೈಲಿ ತರಕಾರಿಯನ್ನೋ ಹಣ್ಣನ್ನೋ ಹಿಡಿದು ಬಂದುಬಿಡುತ್ತಾರೆ. 'ಸಾರ್... ಬಾಳಾ ತಾಜಾ ಇದೆ, ಇಕಳ್ಳಿ ಸಾರ್... ನಮ್ಮ ಜಮೀನಲ್ಲೇ ಬೆಳದದ್ದು...' ಅನ್ನುತ್ತ ಎಲ್ಲರೆದುರು ಇರುಸು ಮುರುಸು ಮಾಡುತ್ತಾರೆ. ಅದು ಅವರು ಅಭಿಮಾನ ತೋರ್ಪಡಿಸುವ ರೀತಿ. ನಾವು ತೆಗೆದುಕೊಳ್ಳಲೇಬೇಕು ಅನ್ನುವ ಇರಾದೆ ಅವನದು. ತೆಗದುಕೊಳ್ಳದಿದ್ದರೆ ಅವನ ಅಭಿಮಾನಕ್ಕೆ ಭಂಗ ಉಂಟುಮಾಡಿದಂತಾಗುತ್ತದೆ. ಏನು ಮಾಡುವುದು? ಇಸಿದುಕೊಳ್ಳುವಂತಿಲ್ಲ, ಬಿಡುವಂತಿಲ್ಲ. 'ಮಾರಾಯಾ... ಯೂನಿಫಾರ್ಮಿನಲ್ಲಿ ಹಂಗೆಲ್ಲ ತಗೊಳ್ಳೋದು ಸಭ್ಯತೆ ಅಲ್ಲ... ನೀನು ಕೊಡೋ ಕಲ್ಲಂಗಡಿ, ಕುಂಬಳಕಾಯಿಗಳನ್ನೆಲ್ಲಾ ಹೆಂಗೆ ಹಿಡಿದುಕೊಳ್ಳೋದು... ಯೂನಿಫಾರ್ಮು ಹಾಕ್ಕೊಂಡು ತಲೆ ಮೇಲೆ ಹೊತ್ಕೊಂಡು ಹೋಗೋಕ್ಕಾಗುತ್ತಾ? ಸ್ನೇಹ ಪ್ರೀತಿ ಏನೇ ಇದ್ದರೂ ಮಾತಲ್ಲೇ ಇದ್ರೆ ಚಂದ... ಇದೆಲ್ಲಾ ಬೇಡ...' ಅಂತ ಅನುನಯಿಸಿ ಹೇಳಿದರೂ ಕೇಳಲೊಲ್ಲ. 'ಆ ಎದುರುಗಡೆ ಕಾಣೋ ಅಂಗಡೀಲಿ ಇಟ್ಟಿರ್ತೀನಿ, ಮನೆಗೆ ಹೋಗಬೇಕಾದರೆ ಮರೀದೆ ತಗಂಡು ಹೋಗಿ ಸಾರ್... ಮಕ್ಳು ಮರೀನಾದ್ರೂ ತಿನ್ಕತವೆ...' ಅಂತ ಮೊಂಡು ಹಿಡಿಯುತ್ತಾನೆ.

ಅಂಥವರಿಗೆ ನಾವು ವಿಶೇಷ ಸಹಾಯವನ್ನೇನೂ ಮಾಡಿರುವುದಿಲ್ಲ. ಎಲ್ಲೋ ಒಂದು ದಿನ ಅವನು ಕೊಡೋ ನಮಸ್ಕಾರವನ್ನು ತೆಗೆದುಕೊಂಡಿರುತ್ತೇವೆ. ಯಾವಾಗಲೋ ಒಂದು ಬಾರಿ ಅವನ ಕುಟುಂಬದವರ ಬಗ್ಗೆ ಕೇಳಿರುತ್ತೇವೆ. ಅವನು ಹೇಳಿಕೊಳ್ಳೋ ಕಷ್ಟಗಳಿಗೆ ಕಿವಿಯಾಗಿರುತ್ತೇವೆ. ಅಷ್ಟೇ ನಾವು ಮಾಡೋದು. ನಮ್ಮ ಪರಿಚಯದಲ್ಲಿ ಅವನಿಗೊಂದು ಸುರಕ್ಷಾ ಭಾವನೆ ಮೊಳೆತಿರಬಹುದು. ಯಾರ ಬಲವೂ ಇಲ್ಲದ ಅಮಾಯಕನೊಬ್ಬನಿಗೆ ನಮ್ಮ ಪರಿಚಯ ಮಾನಸಿಕ ಬಲವನ್ನು ನೀಡಿರಬಹುದು. ನಾವು ಕೊಡೋ ನಮ್ಮ ಫೋನು ನಂಬರು ಅವನಲ್ಲಿ ಯಾವುದೋ ಧೈರ್ಯ ತುಂಬಬಹುದು. ಎಷ್ಟೋ ಮಂದಿಗೆ 'ಏನಾದ್ರೂ ಸಮಸ್ಯೆ ಬಂದ್ರೆ ತಗೋ ನನ್ ನಂಬರು... ಫೋನು ಮಾಡು' ಅಂದರೆ ಸಾಕು, ಧನ್ಯತಾ ಭಾವ ಅನುಭವಿಸುತ್ತಿರುತ್ತಾರೆ. ಇಂಥ ಸಣ್ಣ ಕಾರಣಗಳಿಗಾಗಿ ಅವರು ನಮ್ಮ ಬಗ್ಗೆ ಬೆಳೆಸಿಕೊಳ್ಳುವ ಪ್ರೀತಿ ಅಭಿಮಾನಗಳು ಒಮ್ಮೊಮ್ಮೆ ಅಚ್ಚರಿ ಹುಟ್ಟಿಸುತ್ತವೆ.

ಆಟೊ ಮಂದಿಯ ಕವಿತ್ವದ ಬಗ್ಗೆ ಬರೆಯಹೊರಟರಂತೂ ಒಂದು ಮಿನಿ ಕಾದಂಬರಿಗಾಗುವಷ್ಟು ಸಾಮಗ್ರಿ ದೊರೆಯುತ್ತದೆ. ರತ್ನಾಕರವರ್ಣಿಯ ಭರತೇಶ ವೈಭವ, ಕುಮಾರವ್ಯಾಸನ ಕರ್ಣಾಟ ಭಾರತ ಕಥಾ ಮಂಜರಿಗೆ ಸಮಾನವಾದ ಉಪಮೆಗಳನ್ನು ಬಳಸುವ ಕವಿತ್ವ ಪಟುಗಳಿದ್ದಾರೆ. ಕೆಲಸವಿಲ್ಲದೆ ಖಾಲಿ ಕುಳಿತ ಯಾವುದೋ ಒಂದು ದಿವ್ಯ ಗಳಿಗೆಯಲ್ಲಿ ಹೊಳೆದ ಕೆಲವು ಸಾಲುಗಳನ್ನೇ ಪೇಪರಿನಲ್ಲಿ ಗೀಚಿ ಆವತ್ತಿನ ಬಾಡಿಗೆ ಹೋದರೂ ಚಿಂತೆ ಮಾಡದೆ ಸ್ಟಿಕ್ಕರ್ ಕಟಿಂಗು ಶಾಪುಗಳ ಮುಂದೆ ಗಂಟೆಗಟ್ಟಲೆ ನಿಂತು ಬರೆಸಿಕೊಂಡು ಬರುವ ಸಾಹಿತಿ ಸದೃಶ ಚಾಲಕರಿದ್ದಾರೆ. ಅಂಥಾ ಸ್ವಯಂ ರಚಿತೋಕ್ತಿಗಳನ್ನು ತಾವೇ ಓದುತ್ತಾ ರೋಮಾಂಚನಗೊಳ್ಳುವುದಲ್ಲದೆ ತಮ್ಮ ಸ್ಟ್ಯಾಂಡಿನ ಇತರೆ ಚಾಲಕರಿಗೂ ತೋರಿ ತಬ್ಬಿಬ್ಬುಗೊಳಿಸುವವರಿಗೇನು ಕಡಿಮೆಯಿಲ್ಲ. ಕೆಲವು ಪ್ರೇಮ ಪ್ರಲಾಪಗಳಂತೂ ಮತ್ತೆ ಮತ್ತೆ ಓದಬೇಕೆನಿಸುವುದಲ್ಲದೆ ಅದರ ಕರ್ತರನ್ನು ಕರೆದು ಸಂತೈಸಬೇಕೆನ್ನಿಸುವಷ್ಟು ಅನುಕಂಪ ಹುಟ್ಟಿಸುತ್ತವೆ. ಅದಕ್ಕೆ ತಕ್ಕಂತೆ ಕೆಲವರು 'ನೊಂದ ಜೀವ ಮತ್ತಷ್ಟು ನೋಯಿಸಬೇಡಿ...' ಅಂತ ಬರೆಯಿಸಿಕೊಂಡು ಓಡಾಡುತ್ತಾ ಅದನ್ನು ಓದಿದವರ ಕರುಳು ಕಿವುಚುತ್ತಿರುತ್ತಾರೆ. ಇಂಥ ಎಷ್ಟು